ಇರಲಿಲ್ಲ. ಈಗ ಒಬ್ಬರದೊಬ್ಬರು ಬಟ್ಟೆ ಹಾಕಿಕೊಳ್ಳುವುದನ್ನು ಯೋಚಿಸಲೂ ಆಗದು, ಇಷ್ಟಪಡುವುದೂ ಇಲ್ಲ.

ಆಗೆಲ್ಲ ಪಟ್ಟಣದಲ್ಲಿದ್ದಾರೆ ಎಂದರೆ ಅದೆಂತಹುದೋ ಒಂದು ಕೋಡು ಇದ್ದ ಹಾಗೆ. ಸ್ವಲ್ಪ ಮರ್ಯಾದೆ ಹೆಚ್ಚಿಗೆಯೇ ದೊರೆಯುತ್ತಿತ್ತು. ಹಾಗಿದ್ದರೂ ಹಳ್ಳಿಯ ಜೀವನ, ಪೇಟೆಯ ಜೀವನಕ್ಕೆ ಅಷ್ಟು ವ್ಯತ್ಯಾಸವೇನೂ ಇರಲಿಲ್ಲ. ಸ್ವಲ್ಪ ಅನುಕೂಲತೆಗಳು ಹೆಚ್ಚಿದ್ದವು ಅಷ್ಟೇ. ಮಧ್ಯಮವರ್ಗದ ತುಂಬು ಕುಟುಂಬದ ಮನೆ ಅಜ್ಜನದು. ಹಳ್ಳಿಮನೆಗಳ ಹಾಗೆ ಅಷ್ಟೇನೂ ದೊಡ್ಡದೂ ಅಲ್ಲ. ಜೊತೆಗೆ ಒಂದು ಹಸುವನ್ನೂ ಕಟ್ಟಿಕೊಂಡಿದ್ದರು. ನೀರಿನ ಸಮಸ್ಯೆಯೂ ಇತ್ತು. ಪ್ರತಿದಿನ ನೂರಾರು ಕೊಡಗಟ್ಟಲೆ ನೀರನ್ನು ಒಳಗಿನ ತೊಟ್ಟಿಗಳಿಗೆ ತುಂಬಿಸಬೇಕಿತ್ತು. ಹೊರಗಿನ ತೊಟ್ಟಿಯಿಂದ ಒಳಗಿನ ತೊಟ್ಟಿಯವರೆಗೂ ನಾಲ್ಕೈದು ಜನ ಮಾನವ ಸರಪಳಿಯ ತರಹ ನಿಂತು ಒಬ್ಬರಿಗೊಬ್ಬರು ಕೊಡಗಳನ್ನು ಪಾಸ್ ಮಾಡುತ್ತಿದ್ದರು. ಸ್ನಾನಕ್ಕೂ ನೀರೊಲೆಯನ್ನೇ ಹೆಚ್ಚು ಬಳಸುತ್ತಿದ್ದುದು. ಅಷ್ಟೆಲ್ಲದರ ನಡುವೆಯೂ ಬಂದು ಹೋಗುವ ಜನರನ್ನು ಅವರು ಸುಧಾರಿಸುತ್ತಿದ್ದ ರೀತಿ ಈಗ ನೆನೆದರೆ ಅಚ್ಚರಿಯಾಗುತ್ತದೆ.

ಎಷ್ಟೋ ಸಲ ಪರೀಕ್ಷೆಗೆಂದು ಹಳ್ಳಿಯಿಂದ ಬಂದು ವಾರಗಟ್ಟಲೆ ಉಳಿದುಕೊಳ್ಳುವವರಿದ್ದರು. ಮತ್ತೂ ಕೆಲವೊಮ್ಮೆ ಆ ಕೋಚಿಂಗ್, ಈ ಟ್ಯೂಷನ್ನು ಅಂತ ತಿಂಗಳುಗಟ್ಟಲೆ ನಿರಾತಂಕವಾಗಿ ಮಕ್ಕಳನ್ನು ಬಿಟ್ಟು ಹೋಗುತ್ತಿದ್ದರು. ಅವರು ಮನೆಯಲ್ಲಿದ್ದ ನಮ್ಮಂತಹ ಪುಟಾಣಿಗಳಿಗೆ ಸಂಜೆಯ ಹೊತ್ತು ಪಾಠ ಹೇಳಿಕೊಡುತ್ತಿದ್ದುದೂ ಇತ್ತು. ಹೆಣ್ಣುಮಕ್ಕಳಿದ್ದರೆ ಮನೆಯ ಕೆಲಸಕ್ಕೆ ಕೈಜೋಡಿಸುತ್ತಿದ್ದರು. ಹೆಣ್ಣನ್ನು ತೋರಿಸಲೂ ಕರೆತರುವುದಿತ್ತು. ಆಕೆಗೆ ಮನೆಯವರೇ ತಮ್ಮಲ್ಲಿದ್ದ ಒಳ್ಳೆಯ ರೇಷ್ಮೆ ಸೀರೆ, ಒಡವೆ ಹಾಕಿ, ರೆಡಿ ಮಾಡಿ, ವಧು ಪರೀಕ್ಷೆಗೆ ತಮ್ಮದೇ ಮನೆಮಗಳೆಂಬುವಂತೆ ಸಡಗರದಿಂದ ಎಲ್ಲವನ್ನೂ ಅಣಿಮಾಡುತ್ತಿದ್ದರು. ಆಸ್ಪತ್ರೆಗೆ ತೋರಿಸಿಕೊಳ್ಳುವುದಕ್ಕೆ ಬರುವವರೂ ಹೆಚ್ಚಿದ್ದರು. ಹಳ್ಳಿಗಳಲ್ಲಿ ವಾಹನ ಸೌಕರ್ಯ ಸರಿಯಾಗಿರದೇ ಇರುವುದರಿಂದ, ವೈದ್ಯರು ಕೊಟ್ಟ ಹೆರಿಗೆ ತಾರೀಕಿಗಿಂತ ವಾರ, ಹದಿನೈದು ದಿನದ ಮುಂಚೆಯೇ ಬಸುರಿ ಹೆಣ್ಣುಮಕ್ಕಳನ್ನು ಕರೆದುಕೊಂಡು ಬರುತ್ತಿದ್ದರು. ಅದರಲ್ಲೂ ಹೆರಿಗೆಯೋ ಮತ್ತೊಂದೋ ಆಗಿ ಅಡ್ಮಿಟ್ ಆಗುವ ಪ್ರಸಂಗ ಬಂದರೆ ಮನೆಯಿಂದಲೇ ಗಂಜಿ, ಬಿಸಿ ನೀರು, ಕಾಫಿ, ಊಟ ಅಂತೆಲ್ಲ ತೆಗೆದುಕೊಂಡು, ಸೈಕಲ್ ಮೇಲೆ ಹೋಗಿ ಕೊಡುವ ಕೆಲಸ ತಮ್ಮ ಅಥವಾ ಚಿಕ್ಕಪ್ಪಂದಿರಿಗೆ ಬೀಳುತ್ತಿತ್ತು. ಪಾತ್ರೆಗಳು, ಬಟ್ಟೆಗಳನ್ನು ಬೆಳಗುವ, ತೊಳೆಯುವ ಕೆಲಸಕ್ಕೆ ವಿರಾಮವೆಂಬುದೇ ಇರುತ್ತಿರಲಿಲ್ಲ. ಆಸ್ಪತ್ರೆಯಲ್ಲಿ ಇರುವವರನ್ನು ನೋಡಲು ಬರುತ್ತಿದ್ದ ದಂಡು ದಂಡು ಜನರನ್ನು ಸುಧಾರಿಸುವುದೂ ಸುಲಭವಿರುತ್ತಿರಲಿಲ್ಲ. ಒಡವೆ ಮಾಡಿಸಲು ಬಂಗಾರದ ಅಂಗಡಿಗೆ, ಹೊಸದಾಗಿ ಬಿಡುಗಡೆಯಾದ ಸಿನೆಮಾ ನೋಡಲು, ಮದುವೆಗೆ, ಸಾಲ, ಬಡ್ಡಿ ವಸೂಲಿಗೆ, ಸಂತೆ ಮಾಡಲು, ಹಳ್ಳಿಗಳಲ್ಲಿನ ಅಂಗಡಿಗಳಿಗೆ ಲೋಡ್ ಹಾಕಿಸಲು, ಹೀಗೆ ಯಾವುದಾದರೊಂದು ಕಾರಣಕ್ಕೆ ಬಂದವರು, ನಮ್ಮವರ ಮನೆ ಇದೆ ಹೋಗಿ ಮಾತನಾಡಿಸಿಕೊಂಡು ಬರೋಣ ಎಂದು ಪ್ರೀತಿಯಿಂದಲೇ ಬರುತ್ತಿದ್ದರು. ಹಾಗಾಗಿ ಮನೆ ಸದಾ ಜನರಿಂದ ತುಂಬಿ ತುಳುಕುತ್ತಿತ್ತು. ಮನೆಯಲ್ಲಿ ಇರುವಷ್ಟೇ ಜನ ಎಂದಿಗೂ ಒಪ್ಪತ್ತೂ ಉಂಡ ನೆನಪಿಲ್ಲ.

ಸೋದರತ್ತೆಯರಿಗೆ ಮದುವೆ ನಿಶ್ಚಿತಾರ್ಥವಾದ ನಂತರ, ಊರಿನಿಂದ ಬರುವ ಮಾವಂದಿರು ನೆಂಟರ ಹೊಸ ಲಿಸ್ಟಿಗೆ ಸೇರ್ಪಡೆಯಾಗುತ್ತಿದ್ದರು. ತಮ್ಮ ಭಾವೀ ಹೆಂಡತಿಯನ್ನು ಮಾತನಾಡಿಸಲು ಬರುತ್ತಿದ್ದುದೂ ಇತ್ತು. ಅವರು ಸಿನೆಮಾ, ಸುತ್ತಾಟ ಎಂದು ಹೊರಟರೆ, ಹಿರಿಯರು ಮನೆಯ ಚಿಕ್ಕಮಕ್ಕಳನ್ನೆಲ್ಲ ಅವರ ಹಿಂದೆ ಕಾವಲು ಕಾಯಲು ಉಪಾಯವಾಗಿ ಕಳಿಸುತ್ತಿದ್ದುದೂ ಇತ್ತು. ಹಾಗಾಗಿ ಕೆಲವೊಮ್ಮೆ ಅವರು ನಮ್ಮಂತಹ ಚಿಲ್ಟಾರಿಗಳನ್ನು ಮಧ್ಯವರ್ತಿಗಳನ್ನಾಗಿ ಮಾಡಿಕೊಂಡು, ಚಾಕೊಲೇಟಿನ ಆಮಿಷ ತೋರಿಸಿ ತಮ್ಮ ಮನದನ್ನೆಯರನ್ನು ಅಲ್ಲಿಗೆ, ಇಲ್ಲಿಗೆ ಯಾರಿಗೂ ಗೊತ್ತಾಗದ ಹಾಗೆ ಕರೆತರುವುದನ್ನು ವಹಿಸುತ್ತಿದ್ದರು. ಈಗಿನ ಕಾಲದಲ್ಲಿ ಅದೆಲ್ಲದರ ಗೊಡವೆಯೇ ಇಲ್ಲ. ವಾಟ್ಸಾಪಿನಲ್ಲೇ ಎಲ್ಲಿ ಭೇಟಿಯಾಗಬೇಕೆಂಬ ಚಾಟಿಂಗ್, ವಿಡಿಯೊ ಕಾಲಿಂಗ್ ಎಲ್ಲ ಮುಗಿದು ಹೋಗಿರುತ್ತದೆ.

ಮದುವೆಗೆ ಕರೆಯಲು ಬರುತ್ತಿರುವವರದೂ ಒಂದು ಸಡಗರವೇ. ಇಂದಿನವರ ಹಾಗೆ ವಾಟ್ಸಾಪಿನಲ್ಲಿ ಆಮಂತ್ರಣ ಮತ್ತು ಫೋನ್ ಕರೆಯಲ್ಲಿ ಮುಗಿಸುತ್ತಿರಲಿಲ್ಲ. ಊರೂರಿಗೆ ಹೋಗಿ ಎರಡು ದಿನ ಉಳಿದುಕೊಂಡು, ಮನೆಯಲ್ಲಿನವರನ್ನೂ ಜೊತೆಗೆ ಹೊರಡಿಸಿಕೊಂಡು ಹೋಗಿ ಸಂಬಂಧಿಕರನ್ನೆಲ್ಲಾ ಕರೆದು ಬರುತ್ತಿದ್ದುದುಂಟು. ಅದೂ ಆಗದಿದ್ದರೆ ಮನೆಯಲ್ಲಿನ ಹುಡುಗರ ಸೈಕಲ್ ಅಥವಾ ಸ್ಕೂಟರ್ ಹಿಂದೆ ಕುಳಿತು ಹೋಗಿ ಆಮಂತ್ರಣ ಪತ್ರಿಕೆ ಕೊಟ್ಟು ಬರುತ್ತಿದ್ದರು. ಸಾವಾದರೂ ಸಹ, ಸುದ್ದಿ ಮುಟ್ಟುವುದು ತಡವಾಗುತ್ತಿದ್ದುದರಿಂದ, ಮಣ್ಣಿಗೆ ಹೋಗಲಾಗದಿದ್ದರೂ ತಿಥಿಯಂದಾದರೂ ಹೋಗಿ ಸಾಂತ್ವನ ಹೇಳಿ ಬರುತ್ತಿದ್ದುದುಂಟು. ಈಗ ಸಾವಿನ ಮೆಸೇಜ್ ತಕ್ಷಣಕೆ ಬಂದರೂ, ಬಹುತೇಕರಿಗೆ ಹೋಗಲು ಪುರುಸೊತ್ತಿಲ್ಲವೆಂಬ ನೆಪ, ಜೊತೆಗೆ ಸಂಬಂಧಗಳ ನಡುವೆ ಭಾವನಾತ್ಮಕ ಬೆಸುಗೆ ಸಡಿಲವಾಗುತ್ತಿರುವುದರಿಂದ ಫೋನ್ ಕೂಡಾ ಮಾಡುವವರು ಕಡಿಮೆ. ಎಮೋಜಿಯಲ್ಲೇ ಕೈಮುಗಿದು, 'ರಿಪ್' ಎನ್ನುವ ಮೂರಕ್ಷರದ ಸಾಂತ್ವನ ಕಳಿಸಿ ಋಣ ಕಳೆದುಕೊಂಡೆವೆಂಬ ಭ್ರಮೆಯಲ್ಲಿ ನಿಟ್ಟುಸಿರು ಬಿಡುತ್ತಾರೆ.



ಇನ್ನು ಮದುವೆಗಳೆಲ್ಲ ಮನೆಯ ಮುಂದೆಯೇ ನಡೆಯುತ್ತಿದ್ದುದರಿಂದ, ವಾರಕ್ಕೆ ಮುಂಚೆಯೇ ಜನ ಜಾತ್ರೆಯೇ ಬಂದು ಸೇರುತ್ತಿತ್ತು. ಯಾರು ಗೊತ್ತಿರಲಿ, ಬಿಡಲಿ ನಮ್ಮ ನಮ್ಮ ವಯಸ್ಸಿನ ಮಕ್ಕಳು ಸಿಕ್ಕರೆ ಸಾಕು, ಜೊತೆಯಾಗಿ ಆಡುತ್ತಾ ಕಾಲ ಕಳೆದುಬಿಡುತ್ತಿದ್ದೆವು. ಈಗಿನವರ ಹಾಗೆ ಹುಟ್ಟಿದ ಕೂಸಿನಿಂದ ಹಿಡಿದು ಪ್ರತಿಯೊಬ್ಬರೂ ಯಾವ ದಿನ ಯಾವ ಬಟ್ಟೆ ಹಾಕಬೇಕು, ಯಾವ ಅಲಂಕಾರ ಮಾಡಿಕೊಳ್ಳಬೇಕು ಎಂದೆಲ್ಲ ತಲೆಕೆಡಿಸಿಕೊಳ್ಳುವ ಗೊಡವೆಯೇ ಇರುತ್ತಿರಲಿಲ್ಲ. ಥಾನ್‌ಗಟ್ಟಲೆ ಬಟ್ಟೆ ತಂದು ಎಲ್ಲ ಹೆಣ್ಣುಮಕ್ಕಳಿಗೂ ಒಂದೇ ತರಹದ ಲಂಗಾ ಬ್ಲೌಸ್, ಗಂಡಸರಿಗೆ ಪ್ಯಾಂಟು ಶರ್ಟು ಹೊಲಿಸಿಬಿಟ್ಟರೆ ಮುಗಿಯುತ್ತಿತ್ತು. ನಂತರವೂ ಅವರ ಸೀಮಂತ, ಬಾಣಂತನ, ನಾಮಕರಣ ಅಂತೆಲ್ಲ ಸಾಲು ಸಾಲಾಗಿ ಕಾರ್ಯಕ್ರಮಗಳು ನಡೆಯುತ್ತಾ, ಅವರನ್ನು ನೋಡಲು, ಮಾತನಾಡಿಸಲು ಬರುವವರು ಹೆಚ್ಚಾಗಿ, ಮತ್ತಷ್ಟು ಹೊಸ ಹೊಸ ಪರಿಚಯದ ಮುಖಗಳೆಲ್ಲ ಕಂಡುಬರುತ್ತಿದ್ದವು.

ಅತಿಥಿಗಳು ಯಾವಾಗ ಬರುತ್ತಾರೆ, ಎಷ್ಟು ಜನ ಬರುತ್ತಾರೆ, ಎಷ್ಟು ದಿನ ಇರುತ್ತಾರೆ, ಯಾವಾಗ ಹೊರಡುತ್ತಾರೆ ಯಾವುದೂ ಗೊತ್ತಿರುತ್ತಿರಲಿಲ್ಲ. ಕೆಲವರು ಬರುತ್ತೇವೆಂದು ಪತ್ರ ಹಾಕಿದರೂ, ಅದು ಎಷ್ಟೋ ಸಲ ಅವರು ಬಂದ ಮೇಲೆಯೇ ತಲುಪಿದ್ದಿದೆ. ಹಾಗೆಯೇ, ಊರಿಗೆ ಹೋಗುತ್ತೇವೆ ಎಂದು ಹೊರಟವರನ್ನು ಇನ್ನೊಂದು ನಾಲ್ಕು ದಿನ ಇದ್ದು ಹೋಗಿ ಎಂದು ಬಲವಂತದಿಂದ ಅವರ ಕೈಚೀಲ ಕಸಿದುಕೊಂಡು ಉಳಿಸಿಕೊಳ್ಳುತ್ತಿದ್ದುದೂ ಇತ್ತು. ಹೊರಡುವಾಗ ಮನೆಯಲ್ಲಿರುವ ಹಿರಿಯರ ಕಾಲಿಗೆ ಬಂದವರು, ಹೊರಟವರಲ್ಲಿದ್ದ ಹಿರಿಯರ ಕಾಲಿಗೆ ಮನೆಯಲ್ಲಿದ್ದ ಮಕ್ಕಳು ನಮಸ್ಕರಿಸುವ ಪರಿಪಾಟವಿತ್ತು. 'ಮತ್ತೆ ಯಾವಾಗ ಬರುತ್ತೀರಿ' ಎಂದು ಕಕ್ಕುಲಾತಿಯಿಂದ ವಿಚಾರಿಸುವುದಿತ್ತು. ಸುಗ್ಗಿಯ ನಂತರವೋ, ಉಗಾದಿಗೆ ಮುಂಚೆಯೋ, ಹೀಗೆ ಏನೋ ಒಂದು ಸೂಚನೆ ಹೇಳುತ್ತಲೇ ಟಾಟಾ ಮಾಡುತ್ತಾ ಹೊರಡುತ್ತಿದ್ದರು.

ತೀರ ಹತ್ತಿರದ ಕೆಲ ಬಂಧುಗಳನ್ನು ಬಿಟ್ಟರೆ, ಆಗೆಲ್ಲ ಮನೆಗೆ ಭೇಟಿ ನೀಡುತ್ತಿದ್ದ ಪರಿಚಿತರು ಎಂದರೆ ಗೌಳಿ ಕಮಲವ್ವ, ಕರೆಂಟ್ ಬಿಲ್ ಬರೆಯುವ ಕಾಳಪ್ಪ, ಪೋಸ್ಟ್‌ಮ್ಯಾನ್